**ಕರ್ನಾಟಕ ಸರ್ಕಾರ**

**ಕರ್ನಾಟಕ ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಅಡ್ಡರಸ್ತೆ,**
**ಮಲ್ಲೇಶ್ವರಂ, ಬೆಂಗಳೂರು–560 003**

ಅಧಿಸೂಚನೆ ಸಂಖ್ಯೆ:ಪಿಸಿಸಿಎಫ್:ಸಿ:ಸಿಆರ್-18/ಪಾ.ಚೀ/:2011-12 ದಿನಾಂಕ : 19-09-2011.

## ***ಇ–ಟೆಂಡರ್ ಅಧಿಸೂಚನೆ***

ವಿಷಯ : ಪಾಲಿದೀನ್ ಚೀಲ/ಹಾಳೆ/ನೇಯ್ದ ಚೀಲಗಳ ಪೂರೈಕೆಗಾಗಿ
ಅರ್ಹತಾಪೂರ್ವ “ಇ” ಟೆಂಡರ್ ದರದ ಪ್ರಕಟಣೆ ಬಗ್ಗೆ

* * * *

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2011–12ನೇ ಸಾಲಿನಲ್ಲಿ ನವೆಂಬರ್ 2011 ರಿಂದ ಅಕ್ಟೋಬರ್ 2012 ರವರೆಗಿನ ಅವಧಿಯಲ್ಲಿ ವಿವಿಧ ಅಳತೆಯ ಪಾಲಿಥೀನ್ ಚೀಲ/ಹಾಳೆ/ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಸರ್ಕಾರದಿಂದ ಪರವಾನಗಿ ಪಡೆದ ಆಸಕ್ತ ಉದ್ದಿಮೆ/ಉತ್ಪಾದಕರಿಂದ ಅರ್ಜಿಗಳನ್ನು ಈ ಕಚೇರಿಯ ಅಧಿಸೂಚನೆ ದಿನಾಂಕ 19–09–2011 ರಲ್ಲಿ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಸಂಕ್ಷಿಪ್ತ ಟೆಂಡರ್ ದರ/ಪ್ರಕಟಣೆಯನ್ನು ಪ್ರಕಟಣೆಯ ಮೂಲಕ ಸೆಳೆಯಲಾಗಿದೆ. ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಇಲಾಖೆಯ http://www.karnatakaforest.gov.in ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪಾಲಿಥೀನ್ ಚೀಲ/ ಹಾಳೆ/ನೇಯ್ದ ಚೀಲಗಳಿಗೆ ಒಂದು ಸಾವಿರ ಚೀಲಗಳಿಗೆ ಅನ್ವಯಿಸುವ ದರವನ್ನು ನಮೂದಿಸಿ ಆಸಕ್ತಿಯಿರುವ ಸರಬರಾಜುದಾರರು ತಾಂತ್ರಿಕ ಮತ್ತು ಆರ್ಥಿಕ ಅರ್ಜಿಯನ್ನು ದಿನಾಂಕ: 18–11–2011ರ ಸಂಜೆ 5.30 ರೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಸಲ್ಲಿಸತಕ್ಕದ್ದು. ತಾಂತ್ರಿಕ ಹರಾಜಿಗೆ (Technical Bid) ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ ~~19~~21–11–2011 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಬಿಡ್‌ವಲ್ಲಿ ಹಾಗೂ ದರ ಟೆಂಡರ್‌ಗಳಲ್ಲಿ ಆಯ್ಕೆಯಾದ ಸಂಸ್ಥೆಗಳ ಪಟ್ಟಿಯನ್ನು ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಮುಖ್ಯಸ್ಥರು, ಅರಣ್ಯ ಪಡೆ).**

ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

ಅಧಿಸೂಚನೆ ಸಂಖ್ಯೆ:ಪಿಸಿಸಿಎಫ್:ಸಿ:ಸಿಆರ್– 18/ಪಾ.ಚೀ/:2011–12 ದಿನಾಂಕ : –09–2011

# ಇ–ಟೆಂಡರ್ ಅಧಿಸೂಚನೆ

**ವಿಷಯ** : ಪಾಲಿಥೀನ್ ಚೀಲಗಳು/ನೇಯ್ದ ಚೀಲಗಳ ಪೂರೈಕೆಗಾಗಿ ಉತ್ಪಾದಕರ ಉದ್ದಿಮೆಗಳಿಂದ ಅರ್ಹತಾಪೂರ್ವ "ಇ" ಟೆಂಡರ್ ದರದ ಪ್ರಕಟಣೆ ಬಗ್ಗೆ.

* * * *

ಕರ್ನಾಟಕ ಅರಣ್ಯ ಇಲಾಖೆಯು 2011-12ರಲ್ಲಿ ಅರಣ್ಯ ವಿಭಾಗಗಳಿಗೆ ನವೆಂಬರ್ 2011 ರಿಂದ ಅಕ್ಟೋಬರ್ 2012ರ ಅವಧಿಯಲ್ಲಿ ಪಾಲಿಥೀನ್ ಚೀಲ, ಪಾಲಿಥೀನ್ ಹಾಳೆ ಮತ್ತು ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಭರವಸೆ ಹೊಂದಿದ ಉತ್ಪಾದಕರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ, ಆಸಕ್ತ ಎಲ್‌ಡಿಪಿಇ ಚೀಲ, ಎಲ್‌ಡಿಪಿಇ ಹಾಳೆ ಮತ್ತು ಹೆಚ್‌ಡಿಪಿಇ ನೇಯ್ದ ಚೀಲಗಳ ಉತ್ಪಾದಕ ಉದ್ದಿಮೆ ಘಟಕಗಳ ಗಮನವನ್ನು ಈ ಪ್ರಕಟಣೆಯ ಕಡೆಗೆ ಈ ಮೂಲಕ ಸೆಳೆಯಲಾಗಿದೆ.

ಅರ್ಜಿದಾರರು ತಾಂತ್ರಿಕ ಮತ್ತು ಆರ್ಥಿಕ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟರ್ ಪೋರ್ಟಲ್ ಮೂಲಕ ಸಲ್ಲಿಸತಕ್ಕದ್ದು.

1. ಅರ್ಜಿದಾರರು ಟೆಂಡರ್ ಫಾರಂನ್ನು ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ http://eproc.karnataka.gov.in ಹಾಗೂ http://www.karnatakaforest.gov.in ಇಲಾಖೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

2. 2011–12ನೇ ಸಾಲಿನಲ್ಲಿ ನಡೆಸಲಾಗುವ ಇ–ಟೆಂಡರನ್ನು 3 ಘಟಕಗಳನ್ನಾಗಿ ವಿಂಗಡಿಸಲಾಗಿದೆ. ಅರ್ಜಿದಾರರು ಪ್ರತಿಯೊಂದು ಘಟಕಕ್ಕೂ ಪ್ರತ್ಯೇಕವಾಗಿ ಈ ಕೆಳಗೆ ನಮೂದಿಸಿರುವಂತೆ ಇಎಂಡಿ ಮತ್ತು ಬ್ಯಾಂಕ್ ಗ್ಯಾರಂಟಿಗಳನ್ನು ಸಲ್ಲಿಸಲು ಸೂಚಿಸಿದೆ.

3. ಅರ್ಜಿದಾರರು ಅರ್ಜಿ ಶುಲ್ಕವಾಗಿ ₹550/– (ಐದುನೂರ ಐವತ್ತು ರೂಪಾಯಿ) ಮಾತ್ರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವ ನಿರ್ದೇಶನದ ಪ್ರಕಾರ ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು. ಈ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

4. ಅರ್ಜಿದಾರರು ಪ್ರತಿಯೊಂದು ಘಟಕಕ್ಕೂ ಇಎಂಡಿ ಹಣ ₹25,000/– (ಇಪ್ಪತ್ತೈದು ಸಾವಿರ ರೂಪಾಯಿ) ಮಾತ್ರವನ್ನು ಮುಂಗಡ ಠೇವಣಿಯಾಗಿ ಈ ಕೆಳಗೆ ನಮೂದಿಸಿದ ನಾಲ್ಕು ವಿಧದಲ್ಲಿ ಯಾವುದಾದರೂ ಒಂದರ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿರ್ದೇಶಿಸಿರುವಂತೆ ಕರ್ನಾಟಕ ಸರ್ಕಾರದ ಕೇಂದ್ರೀಕೃತ ಖಾತೆಗೆ ಜಮೆ ಮಾಡತಕ್ಕದ್ದು, ಸದರಿ ಪಾವತಿಯನ್ನು ದೃಢಪಡಿಸಿಕೊಂಡ ನಂತರವೇ ಒಪ್ಪಿಗೆಗೆ ಪರಿಗಣಿಸಲಾಗುವುದು.

ಅ. ಕ್ರೆಡಿಟ್ ಕಾರ್ಡ್

ಆ. ಡೆಬಿಟ್ ಕಾರ್ಡ್

ಇ. ಎನ್‌ಇಎಫ್‌ಟಿ (ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಫಂಡ್ ಟ್ರಾನ್ಸ್‌ಫರ್)

ಈ. ಓಟಿಸಿ (ಓವರ್ ದಿ ಕೌಂಟರ್)

5. ಟೆಂಡರನ್ನು ದಿನಾಂಕ 18–11–2011ರಂದು ಸಂಜೆ 5.30 ಗಂಟೆಯವರೆಗೆ ಮಾತ್ರ ಸ್ವೀಕರಿಸಲಾಗುವುದು.

6. ತಾಂತ್ರಿಕ ಹರಾಜಿಗೆ (Technical Bid) ಸ್ವೀಕರಿಸಲಾದ ಅರ್ಜಿಗಳನ್ನು ದಿನಾಂಕ ~~19~~21–11–2011ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.

7. ದರ ಟೆಂಡರ್‌ಗಳಲ್ಲಿ ಆಯ್ಕೆಯಾದ ಸಂಸ್ಥೆಗಳ ಪಟ್ಟಿಯನ್ನು ದಿನಾಂಕ 23–11–2011 ರಂದು ಸಂಜೆ 4.30 ಗಂಟೆಗೆ ತೆರೆಯಲಾಗುವುದು.

8. ಟೆಂಡರ್ ಪ್ರಕ್ರಿಯೆಯಲ್ಲಿ ನಿಗದಿಪಡಿಸಿರುವ ದಿನಾಂಕಗಳಂದು ಅನಿರೀಕ್ಷಿತ ಸಂದರ್ಭದಲ್ಲಿ ಸರ್ಕಾರದಿಂದ ರಜೆ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನದಲ್ಲಿ ಅದೇ ಸಮಯದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು.

9. ಪಾಲಿಥೀನ್ ಚೀಲ/ಹಾಳೆಗಳಿಗೆ ಪ್ರತಿ ಟನ್‌ಗೆ ಮತ್ತು ನೇಯ್ದ ಚೀಲಗಳಿಗೆ ಒಂದು ಸಾವಿರ ಚೀಲಗಳಿಗೆ ಅನ್ವಯಿಸುವ ದರವನ್ನು ಸಂಭಾವ್ಯ ಪಟ್ಟಿಯಲ್ಲಿ ಸೇರ್ಪಡೆಯಾದವರಿಂದ, ತರುವಾಯ ದರ ಟೆಂಡರ್ ಸ್ವೀಕೃತಿಯ ಮೂಲಕ ನಿಷ್ಕರ್ಶಿಸಲಾಗುವುದು. ಸಫಲ ಟೆಂಡರ್‌ದಾರ/ರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಕರಾರುನಾಮೆಯನ್ನು ಮಾಡಿಕೊಳ್ಳತಕ್ಕದ್ದು, ನಿಷ್ಕರ್ಶಿಸಲಾದ ದರವು ದಿನಾಂಕ 31–10–2012ರ ಅಂತ್ಯದವರೆಗೆ ಚಾಲ್ತಿಯಲ್ಲಿರುತ್ತದೆ.

10. ಟೆಂಡರ್ ದರಗಳನ್ನು ನಮೂದಿಸಬೇಕಾಗಿರುವ ಪಾಲಿಥೀನ್ ಚೀಲ / ಶೀಟ್ ಮತ್ತು ವೋವನ್ ಸ್ಯಾಕ್ಸ್‌ಗಳ ಅಳತೆ ಮತ್ತು ಗುಣಮಟ್ಟದ ವಿವರ

i) **ಪಾರದರ್ಶಕ ಯು.ವಿ. ಸ್ಟೆಬಿಲೈಸಡ್ ಎಲ್‌ಡಿಪಿಇ ಪಾಲಿಥೀನ್ ಚೀಲ. (ಪ್ರತಿ ಟನ್ನಿಗೆ ದರಗಳನ್ನು ನಮೂದಿಸುವುದು.** <u>ತೆರಿಗೆಯನ್ನು ಹೊರತುಪಡಿಸಿ</u>**)**

| ಪಾಲಿಥೀನ್ ಚೀಲಗಳ ಅಳತೆ (ಇಂಚುಗಳಲ್ಲಿ) | ಗೇಜ್ | ಪ್ರತಿ ಕೆ.ಜಿ.ಗೆ ಚೀಲಗಳ ಸರಾಸರಿ ಸಂಖ್ಯೆ | ಷರಾ |
|---|---|---|---|
| 4″ x 6″ | 200 | 625 | ಕೆಳಭಾಗದ ಹೀಟ್ ಸೀಲ್ ದೃಢವಾಗಿದ್ದು ಗ್ಯಾಪ್ ಇಲ್ಲದಂತೆ ಸಂಪೂರ್ಣವಾಗಿರಬೇಕು. ಬ್ಯಾಗುಗಳು ಬಾಕ್ಸ್ ವಿನ್ಯಾಸ ಹೊಂದಿರಬೇಕು. ಸಮರ್ಪಕ ರೀತಿಯಲ್ಲಿ ಒಂದು ಬದಿಯಲ್ಲಿ ಮಾತ್ರ ಚೀಲಗಳ ಬಾಯಿ ತೆರೆದಿರಬೇಕು ಹಾಗೂ ಸೂಕ್ತ ರೀತಿಯಲ್ಲಿ ರಂಧ್ರಗಳನ್ನು ಪಂಚ್ ಮಾಡಿರಬೇಕು.<br>ನರ್ಸರಿ ಅವಧಿಯಲ್ಲಿ ಚೀಲಗಳ ಬಾಳಿಕೆ ದೃಷ್ಟಿಯಿಂದ ಉತ್ತಮ ಗುಣಮಟ್ಟದ ಗ್ರಾನ್ಯೂಲ್‌ಗಳನ್ನು ಬಳಸಿ ತಯಾರಿಸಿರಬೇಕು, ರೀಸೈಕಲ್ ಸಾಮಗ್ರಿ ಅಥವಾ ಗ್ರಾನ್ಯೂಲ್‌ಗಳನ್ನು ಬಳಸಿರಬಾರದು. |
| 5″ x 8″ | 240 | 320 | |
| 6″ x 9″ | 300 | 200 | |
| 8″ x 12″ | 500 | 60 | |
| 10″ x 16″ | 600 | 34 | |